



# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಅಕ್ಟೋಬರ್ ೨೦೨೩)

ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರ **ಬೇಲೂರು ಮಠ**ದಲ್ಲಿ ಅಕ್ಟೋಬರ್ ೨೧ರಿಂದ ೨೪ರ ವರೆಗೆ ದುರ್ಗಾಪೂಜೆಯನ್ನು ವಿಶೇಷ ಶ್ರದ್ಧಾಭಕ್ತಿಗಳೊಂದಿಗೆ ಆಚರಿಸಲಾಯಿತು. ವಿವಿಧ ಶಾಖಾ ಕೇಂದ್ರಗಳಲ್ಲಿ ಕೂಡ ದುರ್ಗಾಪೂಜೆಯ ಆಚರಣೆ ನಡೆಯಿತು.

ಬೇಲೂರು ಮಠದಲ್ಲಿ ನೂತನವಾಗಿ ನಿರ್ಮಿಸಲಾದ ಕಮಾನನ್ನು (Archway) ಅಕ್ಟೋಬರ್ 14ರಂದು ಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು.

**ಹೊಸ ಶಾಖಾಕೇಂದ್ರ :** ತಮಿಳುನಾಡಿನ ಕಾಂಚೀಪುರಂ ಜಿಲ್ಲೆಯಲ್ಲಿರುವ **ತಿರುಮಕೂಡಲ್**ನಲ್ಲಿ ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರವನ್ನು ಆರಂಭಿಸಲಾಗಿದೆ.

## ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ

**ಚೆನ್ನೈಮಠ:** ಅಕ್ಟೋಬರ್ ೧೪ರಂದು ಸರ್ವಧರ್ಮ ಸಮ್ಮೇಳನ ನಡೆಯಿತು. **ದೆಹಲಿ:** ಅಕ್ಟೋಬರ್ ೧ ರಂದು 'ರಾಷ್ಟ್ರನಿರ್ಮಾಣದಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆ' ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ. **ಗೋಲ್ ಪಾರ್ಕ್:** ಎರಡು ದಿನಗಳ ವಿಚಾರ ಸಂಕಿರಣ: ವಿಷಯ: 'ಮಾನವನಲ್ಲಿರುವ ದಿವ್ಯತೆ ಹಾಗೂ ಅನುಷ್ಠಾನ ವೇದಾಂತ ಕುರಿತು ಸ್ವಾಮಿ ವಿವೇಕಾನಂದರ ಕಲ್ಪನೆ.' **ಜೈಪುರ:** 'ಸ್ವಾಮಿ ವಿವೇಕಾನಂದರು ರಾಷ್ಟ್ರ ನಿರ್ಮಾಣಕ್ಕೆ ನೀಡಿದ ಕೊಡುಗೆ' ಕುರಿತು ವಿಚಾರ ಸಂಕಿರಣ. **ಕಂಖಲ್:** ಸರ್ವಧರ್ಮ ಸಮ್ಮೇಳನ–ಅಕ್ಟೋಬರ್ ೧೬. **ಕೋಳಿಕೋಡ್:** ರಾಮಕೃಷ್ಣ ಮಿಷನ್ನಿನ್ನ ಕುರಿತು ಸಾಕ್ಷ್ಯಚಿತ್ರದ ಮಲಯಾಳಂ ಅವತರಣಿಕೆಯ ಬಿಡುಗಡೆ. **ಪಾಲಾ:** 'ನಮಾಮಿ ಸಂಸ್ಕೃತಂ'– ಅಕ್ಟೋಬರ್ ೭, ೮, ೧೪, ೧೫ ರಂದು ಸಂಸ್ಕೃತ ಭಾಷೆಯ ಬೆಳವಣಿಗೆಗಾಗಿ ಕಾರ್ಯಕ್ರಮಗಳು. **ರಾಜ್‌ಕೋಟ್:** ಸೆಪ್ಟೆಂಬರ್ ೨೯ರಂದು ಸಾರ್ವಜನಿಕ ಸಭೆ. 'Ramakrishna Mission in Gujarat' ಸ್ಮರಣ ಸಂಚಿಕೆ ಬಿಡುಗಡೆ. **ಸ್ವಾಮೀಜಿ ಪೂರ್ವಿಕರ ನಿವಾಸ:** ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ವಿಚಾರ ಸಂಕಿರಣ (ಸೆಪ್ಟೆಂಬರ್ ೨೯)


**ಶಾಖಾಕೇಂದ್ರಗಳು: ಭಾರತದಲ್ಲಿ :** ಕೇಂದ್ರ ಸಚಿವರಾದ ಮೀನಾಕ್ಷಿ ಲೇಖಿ ಹಾಗೂ ಇತರ ಗಣ್ಯರು **ದೆಹಲಿ** ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ನಡೆದ ದುರ್ಗಾಪೂಜೆಯಲ್ಲಿ ಭಾಗವಹಿಸಿದರು. **ರಾಜ್‌ಕೋಟ್**ನಲ್ಲಿ ಸೆಪ್ಟೆಂಬರ್ ೨೯ರಂದು ಪೂಜ್ಯ ಗೌತಮಾನಂದಜಿಯರು ಹೊಸದಾಗಿ ನಿರ್ಮಿತವಾದ 'ವಿವೇಕಾನಂದ ಮೌಲ್ಯಶಿಕ್ಷಣ ಹಾಗೂ ಸಾಂಸ್ಕೃತಿಕ ಸಂಸ್ಥೆ'ಯ ಎರಡನೇ ಮಹಡಿಯನ್ನು ಉದ್ಘಾಟಿಸಿದರು. **ಕಲ್ಯಾಣಿ** (ಪಶ್ಚಿಮ ಬಂಗಾಳ) ಕೇಂದ್ರವು ಅಕ್ಟೋಬರ್ ೧ ರಂದು ಖಾಸಗಿ ಸಂಸ್ಥೆಯಾಗಿದ್ದ 'ಶ್ರೀಶ್ರೀ ರಾಮಕೃಷ್ಣ ಸೇವಾ ಸಂಘ'ವನ್ನು ರಾಮಕೃಷ್ಣ ಮಹಾಸಂಘಕ್ಕೆ ಸೇರ್ಪಡೆಗೊಳಿಸಿದ್ದರ ದ್ಯೋತಕವಾಗಿ ಸಾರ್ವಜನಿಕ ಸಭೆಯೊಂದನ್ನು ನಡೆಸಿತು. RKMVERI(ಖಾಸಗಿ ವಿಶ್ವವಿದ್ಯಾಲಯ)ದ ಆಫ್–ಕ್ಯಾಂಪಸ್ ಘಟಿಕೋತ್ಸವವು **ಕೊಯಮತ್ತೂರು** ಮಿಷನ್ ವಿದ್ಯಾಲಯದಲ್ಲಿ ಅಕ್ಟೋಬರ್ ೧೧ರಂದು ನೆರವೇರಿತು. ಕೇಂದ್ರ ಸಚಿವರಾದ ಡಾ. ಸುಭಾಸ್ ಸರ್ಕಾರ್ ಘಟಿಕೋತ್ಸವ ಭಾಷಣ ಮಾಡಿದರು.

**ವೃಂದಾವನ** ಕೇಂದ್ರದಲ್ಲಿ ಅಕ್ಟೋಬರ್ ೧೧ರಂದು ನೂತನವಾಗಿ ನಿರ್ಮಿತವಾದ ನೌಕರರ ನಿವಾಸ ಮೊದಲ ಹಾಗೂ ಎರಡನೇ ಮಹಡಿಯನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು.

**ನರೇಂದ್ರಪುರ** ಕೇಂದ್ರದಲ್ಲಿ ನವೀಕೃತಗೊಂಡ ಶ್ರೀರಾಮಕೃಷ್ಣ ಮಂದಿರವನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು. ವಿಶೇಷ ಪೂಜೆ, ಸಾರ್ವಜನಿಕ ಸಭೆ, ಸಾಧುಭಂಡಾರ ನಡೆದವು.

**ವಿದೇಶಗಳಲ್ಲಿ:** ಡರ್ಬನ್(ದ.ಆಫ್ರಿಕಾ), ಲುಸಾಕ (ಝಾಂಬಿಯಾ), ಮಾರಿಷಸ್, ಬಾಂಗ್ಲಾದೇಶದ ೧೫ ಕೇಂದ್ರಗಳು ದುರ್ಗಾಪೂಜೆಯನ್ನು ಮೂರ್ತಿಯೊಂದಿಗೆ ನೆರವೇರಿಸಿದವು.







Managing Editor : Swami Muktidananda    Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020